ಸಿಗದ ಸಂಬಂಧಗಳು. ನೀನೇ ಏನಾದ್ರೂ ಬಣ್ಣಿಸಿ ಅವಳನ್ನ ಮದುವೆಗೊಪ್ಪಿಸು ವಿಹಾರ'' ಎಂದು ಹೆಚ್ಚೂ ಕಡಿಮೆ ಅಂಗಲಾಚಿದಂತೆ ಕೇಳಿಕೊಂಡಿದ್ದರು.

ಆದರೆ ಮದುವೆಯೆಂದೊಡನೆ ವೈಷ್ಣವಿಯ ಸ್ಪೀಕರ್ ಬೇರೆಯ ರಾಗವನ್ನೇ ಹಾಡುತ್ತಿತ್ತು. "ಬಡತನ ಮತ್ತು ಕುಡುಕತನ  ಇವೆರಡೂ ಕೊಡುವ ಹಿಂಸೆಗಳೆಂಥಾದ್ದೆಂಬುದನ್ನು ನಾನು ನೋಡಿದೀನಿ ಕಣೋ. ಅಮ್ಮನಿಗಿದು ಹೆಗಲ ಮೇಲಿನ ಜವಾಬ್ದಾರಿ ಕಳೆದುಕೊಳ್ಳುವ ಸಂಗತಿ. ಆದರೆ ನನಗೆ ಜೀವನ ಪೂರ್ತಿ ಸಂಬಂಧವೊಂದನ್ನು ಹೆಗಲಮೇಲಿಟ್ಟುಕೊಂಡು ಬದುಕಬೇಕಾದ ಸಂಗತಿ! ಗೊತ್ತೇ ಇಲ್ಲದವನೊಬ್ಬನ ಬೊಗಸೆಯೊಳಗೆ ನನ್ನಿಡೀ ಬದುಕನ್ನೇ ಇಟ್ಟು 'ಒಪ್ಪಿಸಿಕೋ ದೊರೆಯೇ' ಅನ್ನುವ ಮೊದಲು, ಇರುವ ಒಂದೇ ಒಂದು ಬದುಕಿನುದ್ದಕ್ಕೂ ನನ್ನನ್ನು ಸಂಭಾಳಿಸುವ ಯೋಗ್ಯತೆ ಅವನಿಗಿದೆಯಾ ಅಂತ ಸೂಕ್ಷ್ಮವಾಗಿ ಗಮನಿಸುವುದರಲ್ಲಿ ಏನು ತಪ್ಪಿದೆ?" ಎಂದ ಅವಳ ಮಾತಿನಲ್ಲಿ ನನಗೆ ನನ್ನ ಜ್ಯೋತಿ ಆಡಿಹೋದ ಕೊನೆಯ ಮಾತುಗಳೇ ಅನುರಣಿಸಿದ್ದವು.

"ನಾನು ಚೆನ್ನಾಗಿ ಓದಿಕೊಂಡೆ. ಒಳ್ಳೆಯ ಕೆಲಸ ಹಿಡಿದೆ. ಯಾಕೆ ಹೇಳಿ ವಿಹಾರ್? ನನ್ನ ಹಾಗೂ ಗಂಡು ದಿಕ್ಕಿಲ್ಲದ ನನ್ನ ಅಪ್ಪಅಮ್ಮನ ಸುಭದ್ರ ನಾಳೆಗಳಿಗೋಸ್ಕರ ಅಲ್ವಾ? ನನಗೆ ಗೊತ್ತು. ಮದುವೆಯ ವಿಷಯದಲ್ಲಿ ನನಗೆ ಹತ್ತಾರು ಆಯ್ಕೆಗಳಿವೆ ಹಾಗೂ ಅವುಗಳ ಪೈಕಿ ನಾನು ಉತ್ತಮವಾದುದನ್ನೇ ಆಯ್ದುಕೊಳ್ಳುತ್ತೇನೆ. ಈಗ, ಪ್ರೀತಿಯೆಂಬ ಈ ಕ್ಷಣಿಕ ಭಾವುಕತೆಗೆ ಸೋತು ಒಂದಿಡೀ ಬದುಕನ್ನು ನನ್ನ ಕಲ್ಪನೆಯಂತಿರದ ನಿಮ್ಮೊಂದಿಗೆ ಹಂಚಿಕೊಳ್ಳಲಾರೆ. ನನ್ನನ್ನು ಕ್ಷಮಿಸಿ"

ಪ್ರೀತಿ, ಮದುವೆ, ಸಂಬಂಧ... ಇವೆಲ್ಲ ಕೇಳಲಿಕ್ಕೆ ಎಲ್ಲರಿಗೂ ಒಂದೇ ರೀತಿಯ ಪದಗಳು. ಆದರೆ ಪ್ರತಿಯೊಬ್ಬರ ಅಂತರಾಳದಲ್ಲೂ ಹೇಗೆ ಬೇರೆಬೇರೆಯ ಚಿತ್ರವನ್ನೇ ಬಿಡಿಸುತ್ತಾವಲ್ಲಾ? ಇವೆಲ್ಲ ಒಂದಾಗಿ ಸೇರುವ ಆ ಬಿಂದು ಯಾವುದು? ಮದುವೆಯಾ? ಪ್ರತಿಯೊಂದು ಮದುವೆಯಲ್ಲೂ ಈ ಎಲ್ಲ ಸಂಗತಿಗಳೂ ಒಂದಾಗಿ ಕೂಡುತ್ತವೆಯಾ? ನಮ್ಮೆಲ್ಲರಿಗೂ ನಾವ್ನಾವು ಬಯಸಿದ್ದೇ ದೊರಕುತ್ತದೆಯಾ? ಸುತ್ತುತ್ತಿರುವ ಚಕ್ರದಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಬೆನ್ನಟ್ಟುತ್ತಾ ತಿರುಗುತ್ತಿರುವ, ಯಾರಿಗೆ ಯಾರೂ ಸಿಗದ ಬೇರೆ ಬೇರೆ ಅಂಚುಗಳೇ ನಾವೆಲ್ಲ?

ಕಿಟಕಿಯಾಚೆಗೆ ಸರಿದುಹೋಗುತ್ತಿದ್ದ ಕತ್ತಲಿನ ಚಿತ್ರಗಳಂತೆಯೇ ಪ್ರಶ್ನೆಗಳು ಹಾದುಹೋಗುತ್ತಿದ್ದವು.

★★★

ಬೆಳಗಿನ ಎರಡನೇ ಜಾವದ ಕತ್ತಲ ರಸ್ತೆಗೆ ಪ್ರಖರ ಬೆಳಕನ್ನೆರಚುತ್ತಾ ಬಸ್ಸು ಮುಂದಕ್ಕೋಡುತ್ತಿತ್ತು. ನನ್ನ ಹೆಗಲಿಗೊರಗಿಕೊಂಡಿದ್ದ ವೈಷ್ಣವಿ ಗಾಢವಾದ ನಿದ್ರೆಯಲ್ಲಿದ್ದಳು. ಅವಳ ನಿದ್ರೆಗೆ ಭಂಗ ಬರದಂತೆ ಕುಳಿತಲ್ಲೇ ಮೆಲ್ಲನೆ ಮಿಸುಕಾಡಿ ನನ್ನ ಭಂಗಿಯನ್ನು ಕೊಂಚ ಬದಲಾಯಿಸಿದೆ. ಆದರೂ ಆ ಸೂಕ್ಷ್ಮ ಅಲುಗಾಟದಿಂದ ಕೊಂಚ ವಿಚಲಿತಳಾದಂತೆ ನಿದ್ರೆಗಣ್ಣಿನಲ್ಲೇ ಏನೋ ಮಣಗುಟ್ಟಿದಳು. ನನಗೆ ಆಶ್ಚರ್ಯವಾಯಿತು. ಎಷ್ಟು ಗಾಢವಾಗಿ ನಿದ್ರಿಸುತ್ತಿದ್ದಾಳೆ ಕನವರಿಸುವಷ್ಟು! ಈ ಇರುಳಿನ ಈ ಪ್ರಯಾಣದಲ್ಲಿ ನನ್ನ ಹೆಗಲಿಗೊರಗಿ ನಿದ್ರಿಸುತ್ತಿದ್ದಾಳೆ. ಮುಂದಿನ ವರುಷ ಇದೇ ಇರುಳಿನ ಇಂಥಾದ್ದೇ ಪ್ರಯಾಣದಲ್ಲಿ ತನ್ನ ಗಂಡನ ಹೆಗಲಿಗೊರಗಿ ಇಷ್ಟೇ ನಿಷ್ಕಲ್ಮಶವಾಗಿ ನಿದ್ರಿಸುತ್ತಿರುತ್ತಾಳೆ. ಅವರ ನಡುವೆ ಪ್ರೀತಿಯಿರುತ್ತದೆ. ದಂಪತಿಯೆಂಬ ಅನ್ಯೋನ್ಯತೆಯಿರುತ್ತದೆ. ಹಾಗಾದರೆ ನಮ್ಮ ನಡುವಿರುವುದೇನು? ಸ್ನೇಹವಾ? ನಂಬಿಕೆಯಾ? ವಿಶ್ವಾಸವಾ? ಅಥವಾ ಅವೆಲ್ಲವನ್ನೂ ಮೀರಿದ ಮತ್ಯಾವುದೋ ಮಧುರವಾದ, ಆದರೆ ಅಷ್ಟೇ ಕ್ಷಣಿಕವಾದ ನಂಟಾ? ಮುಂದೊಂದು ದಿನ ಗಂಡನ ಹೆಗಲಿಗೊರಗಿ ನಿದ್ರಿಸುವಾಗ ಇವಳಿಗೆ ಈ ದಿನ, ಈ ಇರುಳು, ಈ ಪ್ರಯಾಣಗಳೆಲ್ಲಾ ನೆನಪಾಗುತ್ತಾವಾ? ತನಗೆ ಎಚ್ಚರವಾಗದಿರಲೆಂದು ಮಿಸುಕಾಡದೇ ಕುಳಿತಿದ್ದ ನಾನು ನೆನಪಾಗುತ್ತೇನಾ?

ಜ್ಯೋತಿಗೆ ನನ್ನ ನೆನಪಾಗುತ್ತಿದೆಯಾ?